# ವರ್ಣಾಶ್ರಮ-ಧರ್ಮಗಳಲ್ಲಿ ಗಾರ್ಹಸ್ಥ್ಯದ ಮಹತ್ವ

ಡಾ. ಕೆ. ಎಲ್. ಪ್ರಸನ್ನಾಕ್ಷಿ

ಪುರಾತನ ಕಾಲದಿಂದಲೇ ಭಾರತದಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಭಾವನೆಗಳು ಜನಜೀವನದ ಅವಿಭಾಜ್ಯ ಅಂಗಗಳೆಂದು ಸ್ವೀಕೃತವಾದವು. ತ್ಯಾಗ, ವೈರಾಗ್ಯಗಳ ಹಿರಿಮೆ ಹಾಗೂ ಸಂನ್ಯಾಸಾಶ್ರಮದ ಮಹತ್ವವನ್ನು ಕುರಿತಂತೆ ನಮ್ಮಲ್ಲಿ ಬಹಳ ಒತ್ತು ನೀಡಲಾಗಿದೆ, ನಿಜ. ಆದರೆ ಲೌಕಿಕ ಬದುಕನ್ನೂ ಕುಟುಂಬ ಜೀವನವನ್ನೂ, ಅದೇರೀತಿ ಗೃಹಸ್ಥ ಜೀವನ ಪದ್ಧತಿಯನ್ನೂ ನಮ್ಮಲ್ಲಿ ಎಂದೂ ಕಡೆಗಣಿಸಲಿಲ್ಲ. ಬದಲಾಗಿ, ಅದನ್ನು ಇನ್ನಷ್ಟು ಪರಿಷ್ಕರಿಸಿ, ಸಾಂಸ್ಕೃತಿಕ ಔನ್ನತ್ಯಕ್ಕೇರಿಸುವ ಅತ್ಯುತ್ತಮ ಕಾರ್ಯ ನಡೆಯಿತು. ಈ ಎಲ್ಲ ಅಂಶಗಳನ್ನು ಕುರಿತು ಬರೆದಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

## ಪೀಠಿಕೆ

''ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ ।
ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ದುಃಖಭಾಗ್ಭವೇತ್ ॥ ''

'ಎಲ್ಲರೂ ಸುಖಿಗಳಾಗಿರಲಿ, ರೋಗರಹಿತರಾಗಿರಲಿ, ಎಲ್ಲರೂ ಮಂಗಳಮಯವಾದುದನ್ನು ಕಾಣಲಿ, ಯಾರೊಬ್ಬರೂ ದುಃಖಿಗಳಾಗದಿರಲಿ' ಇದು ಪ್ರತಿಯೊಬ್ಬ ಭಾರತೀಯನ ಪ್ರತಿದಿನದ ಪ್ರಾರ್ಥನೆ. ಭಗವಂತನು ತಮಗಿತ್ತ (ಅಥವಾ ಪರತತ್ತ್ವದ ಅನುಗ್ರಹದಿಂದ ದೊರೆತ) ಈ ಶರೀರವನ್ನು ದೇವಹಿತಕ್ಕಾಗಿ ಬಳಸೋಣ, ಒಳ್ಳೆಯದನ್ನೇ ಕೇಳೋಣ, ಒಳ್ಳೆಯದನ್ನೇ ನೋಡೋಣ, ಒಳ್ಳೆಯದನ್ನೇ ಮಾಡೋಣ. ಸ್ಥಿರವಾದ ಅವಯವಗಳನ್ನು ಕರುಣಿಸಿದ ಆ ಪರತತ್ತ್ವವನ್ನು ಅವುಗಳ ಮೂಲಕವೇ ಸ್ತುತಿಸೋಣ, ಪೂಜಿಸೋಣ... ಈ ರೀತಿ ಅದು ಕರುಣಿಸಿದ ಆಯಸ್ಸನ್ನು ದೇವ (ಪರತತ್ತ್ವ)ಕ್ಕೆ ಹಿತವಾಗುವಂತೆ ಉಪಯೋಗಿಸೋಣ — ಎಂದು ವೈದಿಕ ಶಾಂತಿಮಂತ್ರ (ಭದ್ರಂ ಕರ್ಣೇಭಿಃ...) ಹೇಳುತ್ತದೆ. ಇದೇ 'ಧರ್ಮ'. ನೀನು ನಾನು ಎಲ್ಲರೂ ಬದುಕೋಣ, ಹಿತವಾಗಿ ಸಮರಸದಿಂದ ಬದುಕೋಣ, ಅನುನಯದಿಂದ ಸುಖವಾಗಿ ಶಾಂತಿಸಮೃದ್ಧವಾಗಿ ಬದುಕೋಣ, ಇತ್ಯಾದಿ ಆಶಯದೊಡನೆ ನಡೆದುಕೊಳ್ಳುವ ನಡಾವಳಿ - ಸದಾಚಾರವೇ 'ಧರ್ಮ'.

ಒಂದು ಒಂದಕ್ಕೆ ಪೂರಕ ಪೋಷಕವಾಗಿದ್ದುಕೊಂಡು ಪ್ರತಿಯೊಂದರ ಪ್ರಗತಿ ಶ್ರೇಯಸ್ಸು ಅಭಿವೃದ್ಧಿಗೆ ಸಹಕರಿಸುತ್ತಾ ತಾನೂ ಪ್ರಗತಿ ಹೊಂದುತ್ತಾ ಸಾಗುವುದು 'ಧರ್ಮ'. ತಾನು ಮತ್ತು ತನ್ನ ಅಭಿವೃದ್ಧಿ ಸುಖ ಇತ್ಯಾದಿಗಳನ್ನು ಕೇಂದ್ರವಾಗಿಟ್ಟುಕೊಂಡು, ಇತರ ಎಲ್ಲವನ್ನೂ ಹಾಗೂ ಎಲ್ಲರನ್ನೂ ಕಡೆಗಣಿಸುವುದು ತನ್ನ ನಾಶಕ್ಕೆ ತೆರೆದ ದ್ವಾರವಾಗುತ್ತದೆ. ಹಾಗಾಗದಂತೆ ತಡೆದು ವ್ಯಕ್ತಿಯನ್ನು ಧರ್ಮಮಾರ್ಗದಲ್ಲಿ ನಡೆಯುವಂತೆ ಪ್ರೇರಿಸಲು ಪ್ರವೃತ್ತವಾದವುಗಳೇ 'ಧರ್ಮಶಾಸ್ತ್ರಗಳು'. ಇವು ಸ್ಪಷ್ಟವಾದ ಎಲ್ಲವುಗಳ, ತನ್ಮೂಲಕ ಪ್ರಕೃತಿಯ ಉಳಿವಿಗೆ ಬೆಳವಿಗೆ ಅಗತ್ಯವಾದ ನಿಯಮಾವಳಿಗಳನ್ನು ವ್ಯಕ್ತಿಗತ ಜೀವನಕ್ಕೆ ಜೋಡಿಸಿಕೊಟ್ಟಿವೆ. ಅವುಗಳಲ್ಲಿ 'ವರ್ಣಾಶ್ರಮಧರ್ಮ'ವೂ ಒಂದು.

**ವರ್ಣ:** 'ವರ್ಣ' ಎಂದರೆ ಬಣ್ಣ. ಇದು ಸತ್ವ ರಜಸ್ ತಮಸ್ಸು ಗುಣಗಳಿಗೆ ಸಂಬಂಧಿಸಿದುದು. ಈ ಮೂರು ಗುಣಗಳನ್ನಾಶ್ರಯಿಸಿಯೇ ಸಂಪೂರ್ಣ ಸೃಷ್ಟಿ ವಿಕಾಸ ನಿಂತಿದೆ. ಸೃಷ್ಟಿಯಾಗಿರುವ ಗಿಡ-ಮರ, ಪಶು-ಪಕ್ಷಿ, ಪ್ರಾಣಿ-ಮೃಗಾದಿಗಳಿಂದ ಹಿಡಿದು ಲೋಕ-ಲೋಕಗಳವರೆಗೆ ಎಲ್ಲದರಲ್ಲೂ ಈ ಮೂರು ಗುಣದ ಪ್ರಭಾವ ಕಂಡುಬರುತ್ತದೆ. ಆಯಾಯ ಗುಣಗಳ ಪ್ರಾಬಲ್ಯ ಇರುವವರು ಆಯಾಯ ಗುಣಕ್ಕೆ ಸಂಬಂಧಿಸಿದ ವರ್ಣಕ್ಕೆ ಸೇರುವರು. ವ್ಯಕ್ತಿಯಿಂದ ಗುಣ-ವರ್ಣ ಅಲ್ಲ, ಗುಣದಿಂದ ವರ್ಣ, ಅದನ್ನನುಸರಿಸಿ ವ್ಯಕ್ತಿ — ಇತ್ಯಾದಿ ವರ್ಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಮಹಾಭಾರತದ ಶಾಂತಿಪರ್ವ, ಅನುಶಾಸನ ಪರ್ವ, ಭಗವದ್ಗೀತೆ, ದೇವೀಪುರಾಣ ನಾರದಪುರಾಣ ಮುಂತಾದವುಗಳು ವಿಸ್ತಾರವಾಗಿ ವಿವರಿಸಿವೆ. ಗುಣ (ವರ್ಣ) ಆಧಾರಿತ ವ್ಯಕ್ತಿ; ವ್ಯಕ್ತಿ ಆಧಾರಿತ ಗುಣ(ವರ್ಣ) ಅಲ್ಲ. ಆದುದರಿಂದ ವ್ಯಕ್ತಿ ತನ್ನ ಗುಣಸ್ವಭಾವಗಳನ್ನು ಉತ್ತಮಗೊಳಿಸಿಕೊಳ್ಳುತ್ತಾ ಉತ್ತಮ ವರ್ಣ ಪಡೆಯಬಹುದು ಹಾಗೂ ಪಡೆಯಬೇಕು ಎಂದು ಇವು ತಿಳಿಸುತ್ತವೆ.

ನ ವಿಶೇಷೋಽಸ್ತಿ ವರ್ಣಾನಾಂ ಸರ್ವಂ ಬ್ರಹ್ಮಮಯಂ ಜಗತ್ ।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಣಾ ವರ್ಣತಾಂ ಗತಮ್ ॥

*(ನಾರದಪುರಾಣ, ಪೂರ್ವಭಾಗ, ದ್ವಿತೀಯಪಾದ. ಅಧ್ಯಾಯ ೪೩, ಶ್ಲೋಕ ೫೬)*

ಜಗತ್ತೆಲ್ಲವೂ ಬ್ರಹ್ಮಮಯವೇ, ಎಲ್ಲರೂ ಬ್ರಾಹ್ಮಣರೇ, ಬ್ರಹ್ಮಮಯವಾಗಿ ಇಡೀ ಜಗತ್ತನ್ನು ಕಾಣುತ್ತಾ ಸತ್ಯಧರ್ಮನಿಷ್ಠೆಯುಳ್ಳವರಾಗಿ, ದಯೆ ಅಹಿಂಸೆ ಸರ್ವಭೂತಹಿತ ಮೊದಲಾದ ಸದಾಚಾರವುಳ್ಳವರಾಗಿ ಎಲ್ಲವನ್ನೂ ಪರತತ್ತ್ವಕ್ಕೇ (ಪರಬ್ರಹ್ಮಕ್ಕೇ) ಅರ್ಪಿಸುತ್ತಾ ಬದುಕುತ್ತಿದ್ದ ಅವರದು ಸ್ವಲ್ಪವೂ ಕಲ್ಮಷವಿಲ್ಲದ ಶುದ್ಧ ಬಿಳುಪು ಬಣ್ಣ. (ಅದು ಸತ್ವಗುಣದ್ದು). ಆದರೆ ಕಾಲಕ್ರಮದಲ್ಲಿ ಕೆಲವರು ಕಾಲವೇಗವಶರಾಗಿ ಕಾಮೋಪಭೋಗಗಳಲ್ಲಿ ಮುಳುಗಿ ಸಾಹಸ ಗುಣದಲ್ಲಿ ಬಲ-ಶಕ್ತಿ ಪ್ರದರ್ಶನದಲ್ಲಿ ಆಸಕ್ತಿ ಪಡೆದರು, ತಮ್ಮ ಬಲಶಕ್ತಿಗಳನ್ನು ಆ 'ಬ್ರಹ್ಮ'ದ ರಕ್ಷಣೆಗೆ ಮೀಸಲಿಟ್ಟರು. ಹೀಗಾಗಿ ರಾಗ-ಕಾಮ ಪ್ರೇರಿತರಾದುದರಿಂದ ಇವರ ಬಣ್ಣ ಕೆಂಪು(ಇದು ರಜೋಗುಣದ್ದು). ಅಂತೆಯೇ ಬ್ರಹ್ಮಮಯವಾಗಿ ಶುದ್ಧಾಂತಃಕರಣವಾಗಿ ಬದುಕಲು ಬೇಕಾದ ಸತ್ಯ, ದಾನ, ಅದ್ರೋಹ, ದಯೆ, ಅನುಕಂಪೆ, ಮೊದಲಾದ ಗುಣಗಳನ್ನು ಗೌಣ ಮಾಡಿಕೊಂಡು ಕೃಷಿ, ಗೋವುಗಳ ಪಾಲನೆ, ಕಬ್ಬಿಣ ಚಿನ್ನ ಮೊದಲಾದ ಲೋಹಗಳ ಕೆಲಸ, ಇತ್ಯಾದಿಗಳಿಗೆ ತಮ್ಮ ಜೀವಿತವನ್ನು ಮುಡಿಪಾಗಿಟ್ಟು 'ಬ್ರಹ್ಮ' ಹಾಗೂ ಅದರ 'ರಕ್ಷಕ' ಎರಡೂ ವರ್ಗದ ಪೋಷಣೆಯ ಜವಾಬ್ದಾರಿಯಲ್ಲಿ ಕೆಲವರು ಆಸಕ್ತಿ ಪಡೆದರು. ಇದು ಹಳದಿ ಬಣ್ಣ (ರಜಸು ತಮಸ್ಸುಗಳ ಮಿಶ್ರ ವರ್ಣ). ಮತ್ತೆ ಕೆಲವರು ಪರಿಪೂರ್ಣ ಪರಿಶುದ್ಧವಾದ ತತ್ತ್ವದ ನೆಲೆಯನ್ನು ಸಾಧಿಸುವ ಕಡೆ ಮನಕೊಡದೆ, ಅದರಿಂದ ಜಾರಿ, ಬಹಳ ದೂರ ಸಾಗಿ, ಕೇವಲ ಮೋಹಭೋಗಗಳನ್ನೇ ತಮ್ಮ ಜೀವನದ ಧ್ಯೇಯವಾಗಿ ಮಾಡಿಕೊಂಡರು, ಅವರದು ಕೃಷ್ಣವರ್ಣ (ಕಪ್ಪುಬಣ್ಣ) (ಇದು ತಮೋಗುಣದ್ದು).

ಹೀಗೆ ಪರಿಶುದ್ಧವಾಗಿ ಒಂದೇ ಆಗಿದ್ದ ಬಣ್ಣ-ವರ್ಣವು ವಿವಿಧ ಬಣ್ಣ-ವರ್ಣಗಳಾಗಿ ಮಾರ್ಪಟ್ಟಿತು. ತಮ್ಮ ತಮ್ಮ ಮನೋಧರ್ಮಕ್ಕನುಗುಣವಾದ ವೃತ್ತಿಯಿಂದ ವಿವಿಧ ವರ್ಣಗಳಲ್ಲಿರುವವರು, ತಮ್ಮ ಮೂಲ ವರ್ಣದೆಡೆಗೆ (ಬ್ರಹ್ಮತ್ವದೆಡೆಗೆ) ಸಾಗಲು ಅವರವರಿಗೆ ಯೋಗ್ಯವಾದ ಅಗತ್ಯವಾದ ನಿಯಮಗಳನ್ನು, ಸಂಸ್ಕಾರಗಳನ್ನು ಧರ್ಮಶಾಸ್ತ್ರಗಳು ವಿಧಿಸುತ್ತವೆ. ಈ ನಿಯಮಗಳನ್ನು (ಸದಾಚಾರಾದಿಗಳನ್ನು) ಅನುಷ್ಠಾನ ಮಾಡಬೇಕು. ಆದರೆ ತಮ್ಮ ಈ ವೃತ್ತಿಗಳ ನೆಲೆಯಿಂದ ಮೇಲೆ ಬರಲು ಸಾಧ್ಯವೇ ಇಲ್ಲ ಎಂದಾದರೆ, ಆಯಾ ನೆಲೆಯಲ್ಲಿ ಉಳಿದುಕೊಂಡೇ ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ತಮ್ಮ ಗುಣಸ್ವಭಾವಗಳಿಗೆ ಅನುಗುಣವಾಗಿ ಮಾಡುತ್ತಾ, ಯಾವ ಮೂಲದಿಂದ ಸಕಲ ಜೀವಗಳೂ ಸೃಷ್ಟವಾಗಿವೆಯೋ ಯಾವ ಮೂಲವೇ ಎಲ್ಲವನ್ನೂ ತುಂಬಿಕೊಂಡಿದೆಯೋ ಅಂತಹ ಬ್ರಹ್ಮವಸ್ತುವನ್ನು ತಮ್ಮ ತಮ್ಮ ಕರ್ಮಗಳ ಮೂಲಕವೇ ಆರಾಧಿಸುತ್ತಾ, ಆ ಎಲ್ಲವನ್ನೂ ಅದಕ್ಕೆ ಅರ್ಪಿಸುತ್ತಾ ಜೀವನ ನಡೆಸುವುದರ ಮೂಲಕವೂ ತಮ್ಮ ತಮ್ಮ ನೆಲೆ ಗುಣ ವರ್ಣಗಳಿಂದಲೇ ಪರತತ್ತ್ವ (ಬ್ರಹ್ಮ)ವನ್ನು ಸೇರುವ ಸಿದ್ಧಿಯನ್ನು ಪಡೆಯುತ್ತಾರೆ, ಪಡೆಯಬಹುದು *(ಭಗವದ್ಗೀತೆ ೧೮. ೪೫- ೪೬)* ಎಂದೂ ಅವು ತಿಳಿಸುತ್ತವೆ. ಈ ಅಭಿಪ್ರಾಯವನ್ನು ಮನು, ಆಪಸ್ತಂಬ, ಬೋಧಾಯನ, ಆಶ್ವಲಾಯನ, ಖಾದಿರ, ಗೋಭಿಲ, ಗೌತಮ ಮೊದಲಾದ ಎಲ್ಲಾ ಸ್ಮೃತಿಶಾಸ್ತ್ರಕಾರರೂ ಅನುಮೋದಿಸುತ್ತಾರೆ. ಪ್ರತಿಯೊಬ್ಬ ಶಾಸ್ತ್ರಕಾರನ ಪ್ರಕಾರ ಪ್ರತಿಯೊಬ್ಬನೂ 'ಬ್ರಹ್ಮ'ವಾಗುವುದೇ, ಆಗಬೇಕಾದುದೇ ಜೀವನದ ಗುರಿ, ಯಾರೊಬ್ಬನೂ ನಿಂತ ನೆಲೆಯಲ್ಲೇ ನಿಂತಿರಬಾರದು ಮತ್ತೂ ಕೆಳಕ್ಕೂ ಸಾಗಬಾರದು.

**ಆಶ್ರಮ:** ಈ ಮೂಲನೆಲೆಯನ್ನು, ಬ್ರಹ್ಮತತ್ತ್ವವನ್ನು, ಹೊಂದಲು ಅನುಕೂಲವಾಗುವಂತೆ ಜೀವಿಯ ಜೀವನವನ್ನು ನಾಲ್ಕು ಹಂತಗಳಾಗಿ ಇದೇ ಶಾಸ್ತ್ರಕಾರರು ವಿಭಜಿಸುತ್ತಾರೆ. ಅವುಗಳನ್ನು 'ಆಶ್ರಮ' ಎನ್ನುತ್ತಾರೆ. ಆಶ್ರಮ್ಯಂತಿ, ಸ್ವಂ ಸ್ವಂ ತಪಶ್ಚರಂತಿ — ತಮ್ಮ ತಮ್ಮ ಪಾಲಿನ ಆಯಾ ಅವಧಿಯ ನಡೆ-ನುಡಿ ಆಚಾರ-ವಿಚಾರ, ಆಹಾರ-ವಿಹಾರಗಳನ್ನು ತಪಸ್ಸೆಂಬ ಶುದ್ಧ ಪವಿತ್ರಭಾವದಿಂದ ಎಲ್ಲಿ ಆಚರಿಸಲಾಗುವುದೋ ಅದು 'ಆಶ್ರಮ'. 'ಶ್ರಮು ಉಪತಾಪೇ' ಎಂಬ ಧಾತುವಿಗೆ 'ಆ' ಉಪಸರ್ಗ ಸೇರಿ 'ಆಶ್ರಮ' ಎಂಬ ಪದವಾಗಿದೆ. 'ಆ' ಎಂಬ ಉಪಸರ್ಗಕ್ಕೆ ಇರುವ ಇಪ್ಪತ್ತೇಳು ಅರ್ಥಗಳಲ್ಲಿ ನಿವೃತ್ತಿ, ಪ್ರಾಪ್ತಿ, ಮಿತಿ, ಸಾಧ್ಯ ಎಂಬ ಅರ್ಥಗಳೂ ಇವೆ. ಹೀಗಾಗಿ (೧) ಪ್ರಾಪಂಚಿಕ ಬೇಗೆ ಬಾಧೆ ಬೇನೆಯಿಂದ ನಿವೃತ್ತಿಹೊಂದಲು ಅಗತ್ಯವಾದ ಸಾಧನೆಗಳನ್ನು, ಧರ್ಮಾನುಷ್ಠಾನಗಳನ್ನು ಆಚರಿಸುವ ಕಾಲ ಮಿತಿ 'ಆಶ್ರಮ' ಎಂದೂ, (೨) ತಮ್ಮ ಈ ರೀತಿಯ ಶ್ರಮದಿಂದ 'ಪರತತ್ತ್ವ'ವನ್ನು ಪಡೆ(ಪ್ರಾಪ್ತಿ)ಯುವುದು 'ಆಶ್ರಮ' ಎಂದೂ, (೩) ಬ್ರಹ್ಮಚರ್ಯ ಗೃಹಸ್ಥ ಇವು ಜೀವಿಯ ಆಯುಃಪ್ರಮಾಣದ ಕಾಲಮಿತಿಗೆ ಒಳಪಡುವ ಕಾರಣ ಅವು 'ಆಶ್ರಮ' ಎಂದೂ, (೪) ಇವುಗಳ ಮೂಲಕ ಜೀವಿಗಳು ತಾವು ಹೊರಟು ಬಂದ 'ಮೂಲ'ವನ್ನು ಸೇರಲು ಸಾಧ್ಯ ಎಂಬ ಅರ್ಥದಲ್ಲಿ 'ಆಶ್ರಮ' ಎಂದೂ 'ಆಶ್ರಮ' ಪದಕ್ಕೆ ವಿವಿಧ ಅರ್ಥವಾಗುತ್ತದೆ. ಇದು ಬ್ರಹ್ಮಚರ್ಯ ಗೃಹಸ್ಥ ವಾನಪ್ರಸ್ಥ ಸಂನ್ಯಾಸ ಎಂದು ನಾಲ್ಕು.

ಈ ಎಲ್ಲವೂ ವ್ಯಕ್ತಿಯ ಧರ್ಮಾನುಷ್ಠಾನಕ್ಕೆ, ಸದಾಚಾರ ಸಾಧನೆಗೆ ಸಹಕಾರಿಗಳೇ ಆಗಿವೆ. ಮೇಲೆ ಹೇಳಿದಂತೆ ತಮ್ಮ ತಮ್ಮ ವರ್ಣವನ್ನು ಉತ್ತಮಗೊಳಿಸುತ್ತಾ ಕೃಷ್ಣದಿಂದ ಪೀತ, ಪೀತದಿಂದ ರಕ್ತ — ಹೀಗೆ ಉತ್ಕರ್ಷದೆಡೆಗೆ ಸಾಗಲು ಸಹಕಾರಿಯೂ ಅಗತ್ಯವಾದವೂ ಆಗಿವೆ. ಆದುದರಿಂದಲೇ ಈ ಎರಡೂ (ವರ್ಣ - ಆಶ್ರಮಗಳು) ಪರಸ್ಪರ ಪೂರಕ ಪೋಷಕ ಗುಣಧರ್ಮದೊಡಗೂಡಿ ವ್ಯಕ್ತಿಯ ಉತ್ಕರ್ಷ, ಶ್ರೇಯಸಾಧಕಗಳಾಗಿವೆ.

ತಂದೆಯ ಮನೆಯಿಂದ ಹೊರಟು ಗುರುಕುಲ ಸೇರಿ ಅಲ್ಲಿಯೇ ವಾಸಿಸುತ್ತಾ, ಗುರು 'ನಿನ್ನ ವಿದ್ಯೆ ಪೂರ್ಣವಾಗಿದೆ ನೀನು ನಿನ್ನ ಮನೆಗೆ ಹೊರಡಬಹುದು' ಎಂದು ಆದೇಶಿಸುವವರೆಗೆ ಅವರು ಬೋಧಿಸಿದ ವಿದ್ಯೆಗಳನ್ನು ಕಲಿಯುವ ಅವಧಿಯೇ 'ಬ್ರಹ್ಮಚರ್ಯ.'

**ಗೃಹಸ್ಥ :** ಗುರುವಿನ ಆಶೀರ್ವಾದ, ಆಜ್ಞೆಗಳನ್ನು ಪಡೆದು ಗುರುಕುಲದಲ್ಲಿ ಗುರುಗಳ ಬಳಿ ಕಲಿತ ವಿದ್ಯೆ ಗುಣ ಧರ್ಮಗಳ ಅನುಷ್ಠಾನಕ್ಕೆ ಅನುಕೂಲವಾಗಲಿ ಎಂಬ ಭಾವದಿಂದ 'ಗೃಹಸ್ಥ' ನಾಗುವ ಸಂಕಲ್ಪ ತೊಟ್ಟು ಅದಕ್ಕೆ ಉಚಿತವಾದ ಸಂಸ್ಕಾರವನ್ನು ವ್ಯಕ್ತಿ ಹೊಂದುವ ಅವಧಿ 'ಗೃಹಸ್ಥ'. ಹೀಗೆ ಗೃಹಸ್ಥನಾಗಲು ವ್ಯಕ್ತಿ ಹೊಂದಬೇಕಾದ ಸಂಸ್ಕಾರ 'ವಿವಾಹ'. ವಹ-ಪ್ರಾಪಣೇ ಎಂಬ ಧಾತುವಿನಿಂದ 'ತನ್ನತನವನ್ನು ಹೊಂದು' (ಗಳಿಸಿಕೊ) ಎಂಬ ಅರ್ಥ ಈ ಪದಕ್ಕೆ ಆಗುತ್ತದೆ. ಮತ್ತು (ಉತ್+ವಹ) ಮುಂದೆ ಮುಂದೆ ಉತ್ಕರ್ಷದೆಡೆಗೆ ಸಾಗು ಎಂದೂ ಈ ಪದಕ್ಕೆ ಅರ್ಥ ವಾಗುತ್ತದೆ. ಈ ಸಂಸ್ಕಾರದಲ್ಲಿ, ಗುರುಹಿರಿಯರು ಸಮಾನ ಧರ್ಮಿಗಳು ತೋರಿದ ವ್ಯಕ್ತಿಯನ್ನು ವ್ಯಕ್ತಿ ತನ್ನ ಸಹಭಾಗಿನಿಯಾಗಿ ಸಹಧರ್ಮಿಣಿಯಾಗಿ ಸ್ವೀಕರಿಸುತ್ತಾನೆ. ಹಾಗೆ ಸ್ವೀಕರಿಸುವಾಗ ಆಕೆಯ ಕೈ ಹಿಡಿಯುವ (ಪಾಣಿಗ್ರಹಣ) ಸಮಯದಲ್ಲಿ ಆಕೆಯ ಹಾಗೂ ಆತನ ಸಂಬಂಧ ಮನಸ್ಸು ಮತ್ತು ಮಾತು ಆಕಾಶ ಮತ್ತು ಭೂಮಿ ಇತ್ಯಾದಿಗಳಂತೆ ಒಂದನ್ನಗಲಿ ಒಂದು ಇರಲಾಗದ, ಪರ ಸ್ಪರ ಪೂರಕ ಪೋಷಕ, ಅವಿನಾಭಾವ ಸಂಬಂಧದ್ದು ಎಂದು ಮಂತ್ರಗಳು ಹೇಳುತ್ತವೆ. ಈ ಮೂಲಕ ಸಮಾನ ಗುರಿಯೆಡೆಗೆ ಸಾಗಲು ಅವರಿಬ್ಬರಲ್ಲಿ ಇರಬೇಕಾದ ಸೌಮನಸ್ಯ ಸಾಹಚರ್ಯ ಗಳನ್ನು ಅವು ಆದೇಶಿಸುತ್ತವೆ.

ಹೀಗೆ ಪಾಣಿಗ್ರಹಣ ಮಾಡಿ ಸಂಬಂಧ ಬೆಳೆಸಿದ ಇವರಿಬ್ಬರೂ ಬ್ರಹ್ಮ-ಸರಸ್ವತಿಯರಂತೆ ಪೂರ್ಣ ಆನಂದವುಳ್ಳವರೂ, ಶಿವ-ಪಾರ್ವತಿಯರಂತೆ ಜೀವನದ ಎಲ್ಲಾ ಹೆಜ್ಜೆಗಳಲ್ಲೂ ಒಬ್ಬರನ್ನೊಬ್ಬರು ಅಗಲದವರೂ, ಅರುಂಧತೀ-ವಸಿಷ್ಠರಂತೆ ತಪಸ್ಸಮೃದ್ಧಿ ಯುಳ್ಳವರೂ, ವೇದಗಳು ಧರ್ಮಶಾಸ್ತ್ರಗಳೂ ಪ್ರತಿಪಾದಿಸುವ ಸಂಧ್ಯಾವಂದನೆ ಮೊದಲಾದ ನಿತ್ಯಕರ್ಮ, ಶ್ರಾದ್ಧ-ಯಜ್ಞ ಮೊದಲಾದ ನೈಮಿತ್ತಿಕ ಕ್ರಿಯೆಗಳನ್ನು ಶ್ರದ್ಧೆನಿಷ್ಠೆಗಳಿಂದ ಆಚರಿಸು ವವರೂ, ಸೀತಾ-ರಾಮರಂತೆ ದೊರೆತುದರಲ್ಲಿ ತೃಪ್ತರೂ, ಅನಸೂಯ-ಅತ್ರಿಯರಂತೆ ಪಾತಿವ್ರತ್ಯ ಸತ್ಯಶೌಚ ಮೊದಲಾದ ಶುದ್ಧಗುಣ ಸಂಪನ್ನರೂ, ಲೋಪಾಮುದ್ರೆ- ಅಗಸ್ತ್ಯರಂತೆ ಲೋಕ ದಲ್ಲಿ ಅತಿಪಾವನರೂ, ಸಾವಿತ್ರೀ - ಸತ್ಯವಾನರಂತೆ ಸತ್ಯಸಂಧರೂ ದಮಯಂತೀ-ನಳರಂತೆ ಶೋಭಾಯಮಾನವಾದ ಗುಣಧರ್ಮ ವುಳ್ಳವರೂ ಆಗಿ ಜೀವನ ನಡೆಸಲಿ ಎಂದು ಹಾರೈಸುತ್ತಾ ಗೃಹಸ್ಥರ ನಡೆಯ ಧ್ಯೇಯ ಆದರ್ಶಗಳನ್ನು ಅವು ತಿಳಿಸುವುವು. ಅಷ್ಟೇ ಅಲ್ಲದೆ ಅತಿಧನ್ಯರೂ, ಆಶ್ರಿತರನ್ನು ಗೌರವಿಸಿ ಸತ್ಕರಿಸುವವರೂ, ಭೃತ್ಯ ರಲ್ಲಿ ಕರುಣೆಯುಳ್ಳವರೂ ದೇವತೆಗಳಂತೆ ಪ್ರಕಾಶಮಾನರೂ ಆಗಿ ಜೀವಿಸಲಿ ಎಂಬ ಸತ್ಸಂಕಲ್ಪದಿಂದ ಈ 'ಗೃಹಸ್ಥ-ಆಶ್ರಮ' ನಿರ್ಮಿತವಾಗಿದೆ. ಮೇಲೆ ಹೇಳಿದ ಪೂಜ್ಯರೆಲ್ಲರ ಆದರ್ಶ ಈ ಆಶ್ರಮದ ಆಧಾರ ಸ್ತಂಭ ಎಂಬುದನ್ನು ಪ್ರತಿದಿನವೂ ದಂಪತಿ ಗಳು ಸ್ಮರಿಸುತ್ತಾ ಅವರಿತ್ತ ಆದರ್ಶಮಾರ್ಗದಲ್ಲಿ ನಡೆಯುತ್ತಾ, ಉತ್ಕರ್ಷದೆಡೆಗೆ ತಮ್ಮ ಜೀವನವನ್ನು ನಡೆಸಬೇಕು ಎಂಬುದು ಈ 'ಆಶ್ರಮ'ದ ಧ್ಯೇಯವಾಗಿದೆ, ಎಂಬುದನ್ನೂ ವಿವಾಹ ಮಂತ್ರ ಗಳು ಅವರಿಗೆ ಬೋಧಿಸುವುವು.

ಈ ಸದಾಶಯದೊಡನೆ ಸ್ತ್ರೀಯೊಡನೆ ಏಳು ಹೆಜ್ಜೆಗಳನ್ನಿಟ್ಟು; ಅನ್ನ ಬಲ ವ್ರತ ಸುಖ ಪಶು ಋತು ಯಜ್ಞ ಈ ಎಲ್ಲ ಹೆಜ್ಜೆಗಳಲ್ಲಿ ತನ್ನ ಅಂಶ (ಪಾದ) ಮಾತ್ರದಿಂದ ವಿಶ್ವವನ್ನೆಲ್ಲ (ಒಳಗೂ ಹೊರಗೂ) ತುಂಬಿಕೊಂಡಿರುವ ವಿಷ್ಣುದೇವತೆ ತಮ್ಮೊಡನೆ ಇರು ವನು ಎಂದು ನಂಬಿ ಬ್ರಹ್ಮಮಯ ಬ್ರಹ್ಮಪ್ರಿಯ ಬ್ರಹ್ಮಾರ್ಪಿತ ಬದುಕು ನಡೆಸುವ ನಿರ್ಣಯ ಈ ಆಶ್ರಮಿಯದು.

ಹೀಗೆ ಗೃಹಸ್ಥನಾದವನು ತನ್ನ ಬದುಕನ್ನೇ ಯಜ್ಞಮಯ ವಾಗಿಸಿಕೊಳ್ಳುವನು. ಆದುದರಿಂದ ಅವನನ್ನು 'ಗೃಹಮೇಧೀ' ಎನ್ನುವರು. 'ಮೇಧ' ಎಂದರೆ ಯಜ್ಞ. ತನ್ನ ದಯೆ ದಾಕ್ಷಿಣ್ಯ ದಾನ ಧರ್ಮಾದಿ ಗುಣಗಳಿಂದ ಗೃಹವನ್ನು ಪಾವನಗೊಳಿಸು ವನು (ಮೇಧ) ಎಂದೂ ಅವನು 'ಗೃಹಮೇಧೀ' ಎನ್ನಿಸಿಕೊಳ್ಳು ತ್ತಾನೆ.

**ಗೃಹಸ್ಥಧರ್ಮ:** ಯಜ್ಞಯಾಗಾದಿಗಳನ್ನು ಕಾಲಕಾಲಕ್ಕೆ ನೆರ ವೇರಿಸುತ್ತಾ ದೇವತೆಗಳನ್ನು ತೃಪ್ತಿಪಡಿಸಬೇಕು. ಹಾಗೆ ಯಜ್ಞ ದಿಂದ ತೃಪ್ತರಾದ ದೇವತೆಗಳು ಸಮೃದ್ಧವಾಗಿ ಮಳೆ ಬೆಳೆ ಕರು ಣಿಸುವರು (ಇದು **ದೇವಯಜ್ಞ**). ಹೀಗೆ ದೇವತೆಗಳಿಂದ ಪಡೆದ ಅನ್ನ ಚಿನ್ನ ಮೊದಲಾದ ದ್ರವ್ಯಸಂಪತ್ತನ್ನು ಭಗವಂತನ ಪ್ರಸಾದ ವೆಂದು ಸ್ವೀಕರಿಸಿ ಅದನ್ನು ಅತಿಥಿ-ಅಭ್ಯಾಗತರ ಸಾಧು-ಸಜ್ಜನರ ಸೇವೆಗೆ ವಿನಿಯೋಗಿಸಬೇಕು (ಇದು **ನೃಯಜ್ಞ**). ತಾನು ಗುರು ಕುಲದಲ್ಲಿ ಕಲಿತ ವಿದ್ಯೆಯನ್ನು ಸ್ವತಃ ಅಧ್ಯಯನ ಮಾಡುತ್ತಾ ಅದನ್ನು ಬಲಗೊಳಿಸಿಕೊಳ್ಳುತ್ತಾ ತನ್ನ ಬಳಿ ವಿದ್ಯೆಯನ್ನು ಬೇಡಿ ಬಂದವರಿಗೆ ಹೇಳಿಕೊಡಬೇಕು (ಇದು **ಋಷಿಯಜ್ಞ**). ಶ್ರಾದ್ಧ ಕಾಲದಲ್ಲಿ, ಗತಿಸಿದ ಪಿತೃಗಳಿಗೆ ಶ್ರಾದ್ಧ ಕರ್ಮವನ್ನು ಶ್ರದ್ಧೆ ನಿಷ್ಠೆ ಭಕ್ತಿ ಪ್ರೇಮ ಗೌರವಗಳಿಂದ ನಡೆಸಬೇಕು (ಇದು **ಪಿತೃಯಜ್ಞ**). ಅಷ್ಟೇ ಅಲ್ಲದೆ ಗೃಹಿಣಿಯು ಅಡಿಗೆ ಮನೆಯಲ್ಲಿ ಸಿದ್ಧಪಡಿಸಿದ ಪದಾರ್ಥ(ಅನ್ನ)ವನ್ನು ಪ್ರತಿದಿನವೂ ಅಗ್ನಿಯಲ್ಲಿ ಅರ್ಪಿಸಿ ದೇವತೆಗಳನ್ನು ತೃಪ್ತಿಪಡಿಸಬೇಕು. ಆನಂತರ ಮನೆಯ ಸುತ್ತಲೂ ದಕ್ಷಿಣದಲ್ಲಿ ಯಮನಿಗೆ, ಪಶ್ಚಿಮದಲ್ಲಿ ವರುಣನಿಗೆ, ಹೀಗೆ ಹೇಳುತ್ತಾ ಎಲ್ಲಾ ದಿಕ್ಪಾಲಕರಿಗೆ ನೈವೇದ್ಯವನ್ನು ಅರ್ಪಿಸಬೇಕು. (ಈಗ ಇದು ಕೇವಲ ದೇವಸ್ಥಾನಗಳಿಗೆ ಮಾತ್ರ ಸೀಮಿತವಾಗಿದೆ. ಹಿಂದೆ ಅದನ್ನು ಒಬ್ಬರಿಗೆ ಆಹಾರವಾಗುವಷ್ಟು ಸಮೃದ್ಧವಾಗಿ ಇಡುತ್ತಿದ್ದರು. ಈಗ ದೇವಾಲಯಗಳಲ್ಲೂ ನಾಲ್ಕು ಕಾಳು ಮಾತ್ರ ಹಾಕುತ್ತಾರೆ ಅಷ್ಟೆ.) ಈ ಆಹಾರ ವಿಶ್ವೇದೇವತೆಗಳಿಗೆ ಸಲ್ಲುವುದು. ಅಂದರೆ ವಿಶ್ವದಲ್ಲಿ ಪಶುಪಕ್ಷಿ ಪ್ರಾಣಿ ಮೃಗಾದಿರೂಪ ತಳೆದಿರುವ ದೇವತೆಗಳು, ಅವರಿಗೆ ನೀಡುವ ತೃಪ್ತಿ (ಇದು **ಭೂತಯಜ್ಞ**). ಹೀಗೆ ಇಟ್ಟ ಆಹಾರ, ಆಹಾರವೇ ದೊರಕದ ಮನುಷ್ಯರೂ ಸ್ವೀಕ ರಿಸಬಹುದು (ಅಷ್ಟು ಸಮೃದ್ಧವಾಗಿರಬೇಕು) ಇದನ್ನು 'ವೈಶ್ವ

ದೇವಬಲಿ' ಎಂದು ಹೇಳುತ್ತಾರೆ. ಶ್ರಾದ್ಧಕ್ರಿಯೆ ಇದ್ದ ದಿನವೂ ಗೃಹಸ್ಥನಾದವನು, ಶ್ರಾದ್ಧಕರ್ಮ ಮುಗಿದು ಪಿತೃದೇವತೆಗಳು ತೃಪ್ತರಾದ ನಂತರ ಈ ವೈಶ್ವದೇವವನ್ನು ಇಡಬೇಕು. ಇದು ಅವನ ಪ್ರಧಾನ ಕರ್ತವ್ಯ. ಹೀಗೆ ಗೃಹಸ್ಥ ಎಲ್ಲರಿಗೂ ಅನ್ನ ಹಾಗೂ ಆಶ್ರಯಗಳನ್ನು ನೀಡುವ ಮಹಾನುಭಾವ.

(ಈ ರೀತಿ ಯಜ್ಞಮಯವಾದ ಬದುಕನ್ನು ನಡೆಸಿದಾಗ ವ್ಯಕ್ತಿಗೆ ಜೀವನವು ಬಂಧನಾತ್ಮಕವಾಗುವುದಿಲ್ಲ. ಜೀವಿ ಕರ್ಮ ಬಂಧನದಿಂದ ಬಿಡುಗಡೆ ಹೊಂದಿ ಅಮೃತನಾಗುತ್ತಾನೆ. **'ಯಜ್ಞಾರ್ಥಾತ್ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮ ಬಂಧನಃ'** *(ಗೀತೆ, ೩.೯)* **'ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ'** *(ಗೀತೆ, ೩.೧೩)*. **'ಯಜ್ಞಶಿಷ್ಟಾಮೃತಭುಜಃ ಯಾಂತಿ ಬ್ರಹ್ಮ ಸನಾತನಂ'** *(ಗೀತೆ,.೪.೩೧)* ಎಂದು ಭಗವದ್ಗೀತೆ ತಿಳಿಸುತ್ತದೆ.)

**ಗಾರ್ಹಸ್ಥ್ಯದ ಮಹತ್ವ:** ಗುರುಕುಲವಾಸಿಗಳು, ಪರಿವ್ರಾಜಕರು, ಚರಾಚರರು, ವ್ರತ ಧರ್ಮ ನಿಯಮಗಳನ್ನು ನಡೆಸುವೆವೆಂದು ಸಂಕಲ್ಪ ಮಾಡಿದವರು, ಎಲ್ಲರೂ ಭಿಕ್ಷೆಗಾಗಿ ಗೃಹಸ್ಥಾಶ್ರಮಿಯನ್ನೇ ಆಶ್ರಯಿಸುತ್ತಾರೆ.

ಧಾರ್ಮಿಕರಂತೆ ವೇಷ ಧರಿಸಿರುವವರು, ತಾವು ಮಾಡಿದ ಧರ್ಮಗಳನ್ನು ತಾವೇ ಹೇಳಿಕೊಳ್ಳುವವರು,(ಗಮನಿಸಿ–ಇದೂ ನಿಂದ್ಯಕರ್ಮ) ಕಾರಣ ಇಲ್ಲದೆ ಅಗ್ನಿಹೋತ್ರ ಬಿಟ್ಟುಬಿಟ್ಟವರು, ಗುರುವಿನ ಬಳಿ ಕಪಟ ವಂಚನೆ ಮಾಡಿರುವವರು, ಎಲ್ಲರಿಗೂ ಗೃಹಸ್ಥನು ಅನ್ನ ನೀಡಬೇಕು.

ಗೃಹಸ್ಥನಾದವನು ಎಂದಿಗೂ ತನಗಾಗಿ ಆಹಾರ ಸಿದ್ಧಪಡಿಸಿಕೊಳ್ಳಬಾರದು. ಹಾಗೆ ತನಗಾಗಿ ಮಾತ್ರ ಬದುಕುವವನು, ಪಾಪವನ್ನೇ ಊಟಮಾಡುತ್ತಾನೆ ಮತ್ತು ಅದನ್ನೇ ತನ್ನ ಮುಂದಿನ ದಾರಿಗೆ ಸಂಗ್ರಹಿಸಿಕೊಳ್ಳುತ್ತಾನೆ. (**'ಸ್ವಾರ್ಥಂ ಪಚನ್ನಘಂ ಕೇವಲಂ ಭುಂಕ್ತೇ ಸ್ವೋದರಂಭರಿಃ'** *(ಮಹಾಭಾರತ, ಶಾಂತಿಪರ್ವ, ಅಧ್ಯಾಯ ೨೪೩)* **'ಕೇವಲಾಘೋ ಭವತಿ ಕೇವಲಾದೀ', 'ಭುಜಂತೇ ತೇ ತ್ವಘಂ ಪಾಪಾಃ ಯೇ ಪಚಂತ್ಯಾತ್ಮಕಾರಣಾತ್'** *(ಗೀತೆ, ೩.೧೩)* ಈ ಎಲ್ಲಾ ಉಕ್ತಿಗಳೂ ಮೇಲಿನ ಮಾತನ್ನು ಪುಷ್ಟೀಕರಿಸುತ್ತವೆ.)

ಹಾಗಾಗಿ ಗೃಹಸ್ಥನಾದವನು ವೈಶ್ವದೇವ, ಅತಿಥಿಗಳು, ತನ್ನ ಪೋಷಣೆಯಲ್ಲಿರುವವರು, ಸ್ವವಾಸಿನಿಯರು, ಗರ್ಭಿಣಿಯರು, ರೋಗರುಜಿನ ಪೀಡಿತರು, ಸೇವಕ ವರ್ಗ ಎಲ್ಲರಿಗೂ ಊಟ ನೀಡಿ ಅನಂತರ ಉಳಿದ ಶೇಷ(ಅಮೃತ)ವನ್ನು ತನ್ನ ಆಹಾರವಾಗಿ ಸೇವಿಸಬೇಕು.

ದೇವರಲ್ಲಿ ಶ್ರದ್ಧೆಭಕ್ತಿಯುಳ್ಳವನಾಗಿ ಕೃತಜ್ಞನೂ, ಸತ್ಯನಿಷ್ಠನೂ, ಮೃದುಗುಣ ಹಾಗೂ ಕ್ಷಮಾಗುಣವುಳ್ಳವನೂ, ಇಂದ್ರಿಯನಿಗ್ರಹವುಳ್ಳವನೂ, ಮಾತ್ಸರ್ಯರಹಿತನೂ, ಸರ್ವ ಜೀವಿಗಳಲ್ಲಿ ಸಮಾನವಾಗಿ ದಯೆ, ಅನುಕಂಪೆ, ಪ್ರೀತಿ, ಮೈತ್ರಿಗಳನ್ನು ಹೊಂದಿರುವವನೂ ಆಗಿರಬೇಕು. ಮುನಿಧರ್ಮಕ್ಕೆ ಸಮಾನವಾಗಿ ನಡೆದುಕೊಳ್ಳುತ್ತಾ, ವೇದಾದಿಗಳ ಅಧ್ಯಯನ ಮಾಡುತ್ತಾ ಶಾಸ್ತ್ರಗಳು ನಿರ್ದೇಶಿಸಿರುವ ಕರ್ತವ್ಯಗಳನ್ನು ನೆರವೇರಿಸುತ್ತ ಮುನಿಗಳೂ ಸಂತೋಷಗೊಳ್ಳುವ ರೀತಿಯಲ್ಲಿ ಸತ್ಯ, ಅಹಿಂಸೆ, ಶಮದಮಾದಿ ನಿಯಮ ಪರಿಪಾಲನೆ ಮಾಡುತ್ತಾ ಗೃಹಸ್ಥ ಜೀವನ ನಡೆಸಬೇಕು.

ಈ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಾದ ಹಣವನ್ನು ನಿಂದ್ಯವಲ್ಲದ ರೀತಿಯಿಂದ ಸಂಗ್ರಹಿಸಬೇಕು. ತನ್ನ ಅಧ್ಯಯನದಿಂದ, ಹವ್ಯಕವ್ಯಗಳಿಂದ, ಯಾಗಯಜ್ಞಗಳಿಂದ, ಹಣಗಳಿಸಬಹುದು. ದೇವಪ್ರಸಾದವಾಗಿ ದೊರೆತುದರಲ್ಲೇ ಗೃಹಸ್ಥ ತೃಪ್ತನಾಗಿರಬೇಕು. (ಹೀಗೆ ಬದುಕನ್ನು ನಡೆಸುತ್ತಿದ್ದವರ ಸಂಖ್ಯೆ ಈಗ್ಗೆ ೮೦–೧೦೦ ವರ್ಷಗಳ ಹಿಂದಕ್ಕೆ ಸಾಕಷ್ಟು ಸಂಖ್ಯೆಯಲ್ಲಿತ್ತು. ಈಗ್ಗೆ ೫೦ ವರ್ಷಗಳ ಹಿಂದಕ್ಕೂ ಈ ಸಂಖ್ಯೆಯಲ್ಲಿ ಇಳಿಮುಖವಿದ್ದರೂ, ಜೀವನವನ್ನು ಯಜ್ಞಮಯವನ್ನಾಗಿ ಭಾವಿಸಿ ತ್ಯಾಗಮಯ ಜೀವನ ನಡೆಸಿದವರು ಬಹುಸಂಖ್ಯೆಯಲ್ಲೇ ಸಿಗುತ್ತಿದ್ದರು) ಪೋಷಣೆಗೆ ಎಷ್ಟು ಬೇಕೋ ಅಷ್ಟು ಮಾತ್ರ ಸ್ವತ್ತು. ಅದರ ಮೇಲೆ ಮಾತ್ರ ವ್ಯಕ್ತಿಗೆ ಅಧಿಕಾರ, ಅದಕ್ಕೆ ಮೀರಿದುದರ ಮೇಲೆ ಹಕ್ಕು ಸ್ಥಾಪಿಸುವವನು ಕಳ್ಳನೇ ಸರಿ, ಅವನು ದಂಡನೆಗೆ ಅರ್ಹನು ಎನ್ನುತ್ತಾರೆ ಶಾಸ್ತ್ರಕಾರರು. ದೇಶ, ಕಾಲ, ಅದೃಷ್ಟಗಳಿಗೆ ತಕ್ಕಂತೆ ದೊರಕಿದುದರಲ್ಲಿ ಸಂತೋಷ ಪಡಬೇಕು. ಸಮಸ್ತ ಭೋಗ್ಯ ವಸ್ತುಗಳನ್ನೂ ಇತರರೊಡನೆ (ಎಲ್ಲಾ ವರ್ಣಕ್ಕೆ ಸೇರಿದವರು; ನಾಯಿ ಮೊದಲಾದ ಪ್ರಾಣಿಗಳು ಕೂಡ) ಯಥೋಚಿತವಾಗಿ ಹಂಚಿಕೊಂಡು, ಅನಂತರವೇ ಉಳಿದುದನ್ನು ತನ್ನ ಭೋಗಕ್ಕೆ ಬಳಸಿಕೊಳ್ಳಬೇಕು. ಇದರಿಂದ ಚಿತ್ತಶುದ್ಧಿಯಾಗುವುದು.

ಗೃಹಸ್ಥನು ಎಲ್ಲಾ ಕೆಲಸ ಮಾಡಬೇಕು. ಅದನ್ನೂ ಅದರ ಫಲವನ್ನೂ ದೇವರಿಗೆ ಅರ್ಪಣೆ ಮಾಡಬೇಕು. ಮಹಾಮುನಿಗಳ ಸೇವೆ ಮಾಡಬೇಕು. ಪ್ರಶಾಂತಚಿತ್ತರಾದ ಸಾಧುಸಜ್ಜನರ ಸಹವಾಸದಲ್ಲಿರುತ್ತಾ ಬುದ್ಧಿಯನ್ನು ಶುದ್ಧಮಾಡಿಕೊಳ್ಳಬೇಕು. ಎಲ್ಲ ಜೀವಿಗಳಿಗೂ ಹಿತವಾಗುವಂತೆ ಇಂಪಾದ ಮಾತುಗಳಿಂದ ಸಂತೋಷಪಡಿಸಬೇಕು. ವಾತ್ಸಲ್ಯದಿಂದ ಎಲ್ಲರೊಡನೆ ವ್ಯವಹರಿಸಬೇಕು. ಋತ್ವಿಕ್ ಪುರೋಹಿತ ಆಚಾರ್ಯ ಅತಿಥಿ ರೋಗಿ ವೈದ್ಯ ಜ್ಞಾತಿ ಬಂಧು ಬಾಂಧವರೊಡನೆ ಪ್ರೀತಿಯಿಂದ ವ್ಯವಹರಿಸಿ ಇಂತಹವರನ್ನು ಗೌರವಿಸಿದಾತನು ಸಕಲಲೋಕಗಳನ್ನೂ ಗೆಲ್ಲುತ್ತಾನೆ. (ಆಚಾರ್ಯ – ಬ್ರಹ್ಮಲೋಕ, ತಂದೆತಾಯಿ–ಪ್ರಜಾಪತಿ ಲೋಕ, ಅತಿಥಿ – ಇಂದ್ರಲೋಕ, ಋತ್ವಿಕ್–ದೇವಲೋಕ ಕುಟುಂಬದವರು – ಅಪ್ಸರಲೋಕ ...ಹೀಗೆ. *(ಮಹಾಭಾರತ, ಶಾಂತಿಪರ್ವ, ಅಧ್ಯಾಯ ೨೪೩)*

ಈ ರೀತಿ ಗೃಹಸ್ಥವೃತ್ತಿಯನ್ನು ಸ್ವಲ್ಪವೂ ಕ್ಲೇಶವೆಂದು ಭಾವಿಸದೆ ನಡೆಸುವವನು ಹತ್ತು ಪೀಳಿಗೆ ಹಿಂದಿನವರನ್ನು, ಹತ್ತು

ಪೀಳಿಗೆ ಮುಂದಿನವರನ್ನೂ ಪವಿತ್ರಗೊಳಿಸುತ್ತಾನೆ. ಮುಕ್ತಿಗೆ, ತನ್ನ ಸ್ವಧಾಮವಾದ ಪರತತ್ತ್ವದ ನೆಲೆಗೆ, ಅರ್ಹನಾಗುತ್ತಾನೆ.

**ಉಪಸಂಹಾರ:**

ವೇದೋಕ್ತವಾದ ಕರ್ಮಾನುಷ್ಠಾನ ಯಜ್ಞಯಾಗಾದಿಗಳ ನಿರ್ವಹಣೆ ಗೃಹಸ್ಥಾಶ್ರಮಿಗೆ ಮಾತ್ರ ಸಾಧ್ಯ. ಆದುದರಿಂದ ಇದು ಪುಣ್ಯತಮವಾದುದು. ಚತುಷ್ಪಾದಿಗಳಲ್ಲಿ ಗೋವು, ಧಾತುಗಳಲ್ಲಿ ಚಿನ್ನ ಶಬ್ದಗಳಲ್ಲಿ ಮಂತ್ರ ಹೇಗೆ ಶ್ರೇಷ್ಠವೋ ಹಾಗೆ ಮನುಷ್ಯ ಜೀವಿಗಳಲ್ಲಿ ಗೃಹಸ್ಥಾಶ್ರಮಿಯೇ ಶ್ರೇಷ್ಠ. ಏಕೆಂದರೆ ಇಲ್ಲಿ ಮಾತ್ರ ದೇವತೆಗಳೂ ಪಿತೃಗಳೂ ಋಷಿಗಳೂ ಸಕಲ ಲೋಕದವರೂ, ಚರಾಚರ ಎಲ್ಲ ಜೀವಿಗಳಿಗೂ ಆಸರೆ ಪೋಷಣೆ ತೃಪ್ತಿ ದೊರಕುವುದು. ಈ ರೀತಿ ಧರ್ಮ ನಡೆಸುವುದು ಬಹಳ ಕಷ್ಟಸಾಧ್ಯವಾದ ವ್ರತ, ಆದುದರಿಂದ ಈ ಗೃಹಸ್ಥಾಶ್ರಮದಲ್ಲೇ ಸರ್ವತಪಸ್ಸೂ ಪ್ರತಿಷ್ಠಿತವಾಗಿದೆ. ಗೃಹಸ್ಥಾಶ್ರಮಿ ಕೈಗೊಳ್ಳುವ ಎಲ್ಲಾ ವ್ರತವೂ ತಪಸ್ಸೇ ಆಗಿದೆ. ಆದುದರಿಂದ ಇದು ಸರ್ವಶ್ರೇಷ್ಠ ಎಂದು ಪರಿಗಣಿತವಾಗಿದೆ ಎಂದು ಶಾಸ್ತ್ರಗಳು ತಿಳಿಸುತ್ತವೆ.

**ಯಥಾ ವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವಜಂತವಃ ।**
**ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ ॥**
**ಯಸ್ಮಾತ್ತ್ರಯೋಽಪ್ಯಾಶ್ರಮಿಣೋ ಜ್ಞಾನೇನಾನ್ನೇನ ಚಾನ್ವಹಂ ।**
**ಗೃಹಸ್ಥೇನೈವ ಧಾರ್ಯಂತೇ ತಸ್ಮಾಜ್ಜ್ಯೇಷ್ಠಾಶ್ರಮೋ ಗೃಹೀ ॥**

*(ಮನುಸ್ಮೃತಿ ೩.೭೭-೭೮)*

ಸಕಲ ಜೀವಿಗಳೂ (ಪ್ರಾಣ) ವಾಯುವನ್ನು ಆಶ್ರಯಿಸಿ ಬದುಕುವಂತೆ ದಿಕ್ಕುದಿಕ್ಕುಗಳಿಂದ ಬರುವ ವಿವಿಧ ಗುಂಪಿಗೆ ಸೇರಿದ ಹಕ್ಕಿ-ಕ್ರಿಮಿಕೀಟಗಳಿಗೆ ಮರದಂತೆ ಎಲ್ಲಾ ಆಶ್ರಮಿಗಳಿಗೂ ಗೃಹಸ್ಥನೇ ಆಶ್ರಯ. ಜ್ಞಾನ ಅನ್ನ ಆಶ್ರಯಗಳನ್ನು ಕೊಟ್ಟು ಎಲ್ಲರನ್ನೂ ಗೃಹಸ್ಥನು ಭರಿಸುವುದರಿಂದ ಗೃಹಸ್ಥಾಶ್ರಮ ಜ್ಯೇಷ್ಠವಾದುದು.

ಹೀಗೆ ವ್ಯಕ್ತಿಯನ್ನು ತಿದ್ದಿ ತೀಡಿ ಸುಂದರ ವಿಗ್ರಹವಾಗಿ ನಿರ್ಮಿಸುವ ವರ್ಣಾಶ್ರಮ ಧರ್ಮಗಳಲ್ಲಿ ಗೃಹಸ್ಥನ ಸ್ಥಾನ ವಿಶಿಷ್ಟವಾದುದಾಗಿದೆ.

ಗೃಹಸ್ಥ ತಾನು ಸಂಪಾದನೆ ಮಾಡಿದುದನ್ನು ಈ ರೀತಿ ಹಂಚಬೇಕು: ಕಾಲುಭಾಗ ತನ್ನ ಸಂಸಾರಕ್ಕೆ, ಕಾಲುಭಾಗ ಧರ್ಮಕ್ಕೆ. ಕಾಲಭಾಗವನ್ನು ಆಪತ್ಕಾಲಕ್ಕೆ ಕೂಡಿಡಬೇಕು. ಮಿಕ್ಕುಳಿದ ಕಾಲುಭಾಗವನ್ನು ತಾನು ಖರ್ಚುಮಾಡಬೇಕು.

ಗೃಹಸ್ಥ ದೇವಭಕ್ತನಾಗಿರಬೇಕು. ಭಗವಂತನನ್ನು ಅರಿಯುವುದೇ ಅವನ ಜೀವನದ ಮುಖ್ಯ ಉದ್ದೇಶವಾಗಿರಬೇಕು. ಆದರೂ ಅವನು ಸದಾ ಕರ್ಮದಲ್ಲಿ ನಿರತನಾಗಿರಬೇಕು. ಬರುವ ಫಲಗಳನ್ನು ಭಗವಂತನಿಗೆ ಅರ್ಪಿಸಬೇಕು.

*— ಸ್ವಾಮಿ ವಿವೇಕಾನಂದ*

